ಪದೇ ಪದೇ ಇಂತಹ ಬೇಡಿಕೆಗಳು ಬರುತ್ತಿರುವುದು ಹೊಸದೇನಾಗಿರಲಿಲ್ಲ. ಒಂದು ವಿಚಾರಕ್ಕೆ ಮಾಡಿದ ಅನುಕೂಲ ಬೇರೆಯದಕ್ಕೂ ಸಿಗುವಂತಾಗಲಿ ಎಂಬ ನಿರೀಕ್ಷೆ ಸಹಜವಾಗಿತ್ತು. ಆದರೆ ಎಲ್ಲರ ಬೇಡಿಕೆಗಳಿಗೆ ನೀರೆರೆಯುತ್ತಾ ಹೋದರೆ ತಮ್ಮ ಕೆಲಸ ಅದರಲ್ಲೇ ಕಳೆದುಹೋಗುವುದೆಂಬ ಪರಿಜ್ಞಾನ ಅವಳಿಗಿತ್ತು. ಅವರ ನಡುವಿನ ಸಂಭಾಷಣೆಗೆ ಮುಕ್ತಾಯ ಹಾಡಿದ ಬಳಿಕ ಅವಳು ಮಾಡಿದ ಮೊದಲ ಕೆಲಸ ತನ್ನ ಸಂಚಾರ ಕಮಿಷನರ್ ಸವ್ಯಸಾಚಿಗೆ ಸಂದೇಶ ರವಾನಿಸಿದ್ದು.

'ತುರ್ತು ರವಾನೆಗೆ ಪರ್ಯಾಯ ಮಾರ್ಗ ಕಲ್ಪಿಸದಿದ್ದರೆ ಬೇಡಿಕೆಗಳು ಬೆಟ್ಟವಾಗುತ್ತವೆ. ನಾನು ಆಗ ಅದನ್ನು ಇತ್ಯರ್ಥಪಡಿಸುವುದರಲ್ಲೇ ಕಾಲ ಕಳೆಯಬೇಕಾಗುತ್ತದೆ ಸರ್.'

'ಈಗಲೇ ಅಷ್ಟೊಂದು ಬೇಸರವೇಕೆ ಹನ್ನಾ? ನಾನು ತಜ್ಞರ ಬಳಿ ಈ ವಿಚಾರ ಕುರಿತು ಚರ್ಚೆ ಮಾಡಿ ಪರ್ಯಾಯ ಮಾರ್ಗಕ್ಕೆ ವ್ಯವಸ್ಥೆ ಮಾಡಲು ಸೂಚಿಸುತ್ತೇನೆ' ಎಂದು ಅವರು ನೀಡಿದ ಭರವಸೆ ಅವಳಿಗೆ ಮರಳುಗಾಡಿಯಲ್ಲಿ ಸಮಾಧಾನದ ಸಿಂಚನವನ್ನು ಚಿಮುಕಿಸಿದಂತಿತ್ತು.

ಅವರ ಅಂದಾಜಿನಂತೆ ಸುಮಾರು ಒಂದು ಗಂಟೆಯಲ್ಲಿ ಸಂಚಾರ ತಿಳಿಯಾದಾಗ ಅಂದಿನ ಕಾರ್ಯಭಾರಗಳಿಗೆ ತಿಲಾಂಜಲಿ ಇತ್ತು ಹನ್ನಾ ತನ್ನ ಮನೆಯ ಹಾದಿ ಹಿಡಿದಾಗ ರಾತ್ರಿಯ ಸೋಲಾರ್ ದೀಪಗಳ ಬೆಳಕು ರಸ್ತೆಯನ್ನು ಬೆಳಗಿನ ಜಾವದ ಸೂರ್ಯನ ಬೆಳಕಿನಂತೆ ಬೆಳಗಿಸುತ್ತಿತ್ತು.

ಅಂದು ಅವಳ ಮಲಗುವ ಕೋಣೆಯ ವಾತಾವರಣವನ್ನು ಮರದಡಿಯ ನೆಲದಂತೆ ಪರಿವರ್ತಿಸಿ ನಿದ್ರೆಯ ವಶವಾಗಿದ್ದಳು. ತನ್ನ ತಾಯಿಯ ಮಡಿಲಿನ ಪ್ರಶಾಂತತೆ ಆವರಿಸಿತ್ತಲ್ಲದೆ ಅಂದಿನ ಚಟುವಟಿಕೆಗಳಿಗೆ ಕಣ್ಣೆವೆಗಳು ಸುಸ್ತಾಗಿ ಮುಚ್ಚಿಕೊಂಡಿದ್ದವು.

* * *

ಅವಳು ನಿರಂತರವಾಗಿ ವರ್ಕ್‌ಶಾಪ್‌ನಲ್ಲಿ ದುರಸ್ತಿಗೊಳಪಡುತ್ತಿದ್ದ ತನ್ನ ರೊಬೋ ಕಮಾಂಡೋ ಕಾಪ್‌ಗಳ ಸ್ಥಿತಿಗತಿ ವಿಚಾರಿಸುತ್ತಾ ಬೆನ್ನುಹತ್ತಿದ ಪರಿಣಾಮವಾಗಿಯೇನೋ ಶೈನಿ ತನ್ನ ಕೆಲಸವನ್ನು ಇಮ್ಮಡಿಗೊಳಿಸಿ ನಿಯಂತ್ರಣ ಕೇಂದ್ರಕ್ಕೆ ಅವುಗಳನ್ನು ರವಾನಿಸಿದ್ದ.

'ನೀವು ಭಾರೀ ಹಟಮಾರಿ. ಅಂತೂ ನಮಗೆ ವಿಶೇಷ ಸಂಚಾರ ವ್ಯವಸ್ಥೆ ಕಲ್ಪಿಸದೆಯೇ ನಮ್ಮಿಂದ ಆದಷ್ಟು ಶೀಘ್ರವಾಗಿ ಕೆಲಸ ಮಾಡಿಸಿಕೊಂಡಿರಿ' ಎಂದು ನಸುನಗುತ್ತಾ ತನ್ನ ಸಹಾಯಕರಿಗೆ ಕಮಾಂಡೋ ರೊಬೋಗಳನ್ನು ಅವುಗಳ ಸಾಗಾಣಿಕೆಗಾಗಿ ತರಿಸಿದ್ದ ವಾಹನದಲ್ಲಿ ಇರಿಸಲು ಸೂಚಿಸಿದ.

ಹನ್ನಾ ಆ ವಾಹನ ಸುರಕ್ಷಿತವಾಗಿ ತಲುಪಿಸಲೋಸುಗ ಹೆಚ್ಚುವರಿ ಭದ್ರತಾ ವ್ಯವಸ್ಥೆಯಡಿ ಸಾಗುವಂತೆ ನೋಡಿಕೊಂಡು ನಂತರ ತನ್ನ ಕರ್ತವ್ಯಕ್ಕೆ ತೆರಳಿದಳು. ಹಿಂದಿನ ದಿನದ ಆಗುಹೋಗುಗಳು ಕೊಂಚಮಟ್ಟಿಗೆ ಅವಿರತ್‌ನ ಗಮನಕ್ಕೂ ಬಂದಿತ್ತೇನೋ. ಅವಳೊಂದಿಗೆ ಸಂಪರ್ಕ ಸಾಧಿಸಿ ತನ್ನ ಬೇಸರ ವ್ಯಕ್ತಪಡಿಸಿದ್ದ.

'ಶೈನಿ ಮತ್ತು ಆ ಆಸ್ಪತ್ರೆಯವರು ಈ ರೀತಿ ಅವಕಾಶ ನೋಡಿ ಬೇಡಿಕೆ ಸಲ್ಲಿಸುತ್ತಾರೆ ಎಂದುಕೊಂಡಿರಲಿಲ್ಲ. ನಾನೂ ಈ ಕಡೆ ಕೆಲಸದಲ್ಲಿ ಬಿಜಿಯಾಗಿಬಿಟ್ಟೆ.'

'ನೀವು ಬರದಿದ್ದುದೇ ಒಳ್ಳೆಯದಾಯಿತು. ಬಹುತೇಕ ನನ್ನ ಕೆಲಸ ವಾಹನದಲ್ಲಿ ಕುಳಿತೇ ಸಂಪರ್ಕಿಸುವುದಾಗಿತ್ತು. ಏಕೆಂದರೆ ನಾನು ಹಿಂದಿರುಗುವಾಗಿನ ಮಾರ್ಗದಲ್ಲಿ ಟ್ರಾಫಿಕ್ ಜಾಮ್ ಆಗಿತ್ತು.'

'ಅಂತೂ ಕಮಿಷನರ್‌ರವರು ನಡೆಸಿದ ಸಭೆಯ ನಂತರ ಚರ್ಚೆಗೆ ಅವಕಾಶ ನೀಡದಂತೆ ನಾವಿಬ್ಬರೂ ಅವಿರತವಾಗಿ ಫ್ರೀ ಆಕ್ಯೂಪೈಡ್ ಆದ್ವಿ. ಈಗ ಒಂದು ಆದೇಶ ಹೊರಬಂದಿರುವುದು ನಿನ್ನ ಗಮನಕ್ಕೆ ಬಂದಿದೆಯೇ?'

'ಯಾವುದು?'

ಕೆಲಸದ ನಿರಂತರ ಜಂಜಾಟದಲ್ಲಿ ತನಗೆ ಬಂದ ಸಂದೇಶಗಳನ್ನು ನೋಡಲೇ ಅವಳಿಗೆ ಪುರುಸೊತ್ತಾಗಿರಲಿಲ್ಲ. ಅವಳ ವಾಕಿ ಸಹಾಯಕಿ ಶಿಮ್ಮಿ ಅವಳಿಂದೇನಾದರೂ ಕಾರ್ಯಾಚರಣೆ ನಡೆಸಬೇಕಾಗಿದ್ದಲ್ಲಿ ಮಾತ್ರ ಪ್ರತ್ಯೇಕವಾಗಿ ಅವಳ ಗಮನಕ್ಕೆ ತರುತ್ತಿತ್ತು. ಕೇವಲ ಮಾಹಿತಿ ಇದ್ದರೆ ಅದನ್ನು ಹನ್ನಾ ಬಿಡುವಿನ ಸಂದರ್ಭದಲ್ಲಿ ನೋಡುತ್ತಿದ್ದಳು.

'ಅರೆಮಾನವ ಪಡೆಗೆ ಕೆಲವು ಕಾರ್ಯಗಳನ್ನು ಪರೀಕ್ಷೆಗಾಗಿ ನೀಡಿ ಅದರ ಫಲಿತಾಂಶ ನೋಡಿದ ಬಳಿಕ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಬಗ್ಗೆ ನೆನ್ನೆ ಸಭೆಯಲ್ಲಿ ಚರ್ಚೆಯಾಗಿ ತೀರ್ಮಾನಿಸಿದಂತೆ ಆಡಳಿತ ವಿಭಾಗ ಅದಕ್ಕೆ ಒಪ್ಪಿಗೆಯ ಮುದ್ರೆ ಹಾಕಿದೆ. ವಿಷಯವನ್ನು ಶಿಥಿಲಾವಸ್ಥೆಯಲ್ಲಿ ಇಡಲಿಕ್ಕಾಗದಿದ್ದರಿಂದ ಕೂಡಲೇ ನಿರ್ಧಾರ ತೆಗೆದುಕೊಂಡು ಕಾರ್ಯಗತಗೊಳಿಸಲು ಸಹ ಸೂಚಿಸಿದ್ದಾರೆ.'

'ನಾನು ಆ ಸಂದೇಶ ನೋಡಿರಲಿಲ್ಲ. ಆಮೇಲೆ ನೋಡ್ತೀನಿ. ಹಾಗಾದರೆ ನೆನ್ನೆ ಚರ್ಚೆಯಾದಂತೆ ಅರೆಮಾನವ ಪಡೆಯ ಸದಸ್ಯರಿಗೆ ನಿರ್ದಿಷ್ಟ ಕೆಲಸ ಹಚ್ಚುವರೇನು?'

'ಆಗಲೇ ಪಟ್ಟಿ ತಯಾರಾಗ್ತಾ ಇದೆ ಹನ್ಸ್. ಇನ್ನೇನು ನಾವು ಅವರನ್ನು ರಸ್ತೆಗಳಲ್ಲಿ, ಸಂಚಾರ ಕಚೇರಿಗಳಲ್ಲಿ ಕೆಲಸ ಮಾಡುವುದನ್ನು ನೋಡುವ ದಿನಗಳು ದೂರವಿಲ್ಲ ಎನಿಸುತ್ತೆ.'

'ಎಂತಹ ಪರಿವರ್ತನೆ! ನಾವು ಪ್ರತಿನಿತ್ಯ ಅವರಿಂದೇನಾದರೂ ಪ್ರತಿಭಟನೆ ಇಲ್ಲವೇ ಯಾವುದಾದರೊಂದು ಸಮಸ್ಯೆ ಎದುರಿಸ್ತಾ ಇದ್ವಿ. ಈಗ ಅವುಗಳಿಂದ ನಮಗೆ ಮುಕ್ತಿ ಸಿಗುವುದೇ?'

'ಆ ವಿಚಾರದಲ್ಲಿ ನಾನು ಆಶ್ವಾಸನೆ ನೀಡಲಿಕ್ಕಾಗದು ಹನ್ಸ್. ಅಂತೂ ಬಹಳ ದಿನಗಳ ಹೋರಾಟದ ಬಳಿಕ ತೆಗೆದುಕೊಂಡ ತೀರ್ಮಾನ ಇದು. ನಮ್ಮ ಸಹಚರರ ಪಟ್ಟಿಗೆ ಹೊಸಬರು ಸೇರ್ಪಡೆಯಾಗ್ತಾರೆ ಅಷ್ಟೇ.'

'ನಾವು ಯಾರೊಂದಿಗೆ ದಿನನಿತ್ಯ ಹೋರಾಡಿ ನಿಭಾಯಿಸಬೇಕಿತ್ತೋ ಅವರೇ ನಮ್ಮ ಸಹಚರರಾಗುವುದನ್ನು ನಾನು ಈ ಹಿಂದೆ ಕನಸು ಮನಸ್ಸಿನಲ್ಲೂ ಎಣಿಸಿಯೇ ಇರಲಿಲ್ಲ.'

'ಜೊತೆಗೊಂದು ಸಮಸ್ಯೆಯನ್ನು ನಾವು ಎದುರಿಸಬೇಕಾಗಿ ಬರಬಹುದು. ಅವರೊಂದಿಗೆ ನಾವು ದೈಹಿಕವಾಗಿ ಹೋರಾಡದಿದ್ದರೂ ನಮ್ಮ ಅನೇಕ ರೊಬೋಕಾಪ್‌ಗಳು ಅವರಿಂದ ದುರಸ್ತಿಗೊಳಪಟ್ಟಿವೆ. ಅವುಗಳ ಮೆಮೊರಿಯಲ್ಲಿ ಈ ಅರೆಮಾನವ ಪಡೆಯ ಸದಸ್ಯರ ಗುರುತುಗಳಿರುತ್ತವೆ. ಅದನ್ನು ನಾವು ರಿಫ್ರೆಷ್ ಮಾಡಿ, ಪಡೆಯ ಸದಸ್ಯರನ್ನು ಶತ್ರು ಎಂದು ಗುರುತಿಸುವ ಬದಲು ಮಿತ್ರ ಎಂದು ಗುರುತಿಸುವಂತೆ ಪ್ರೋಗ್ರಾಮಿಂಗ್ ಮಾಡಬೇಕಾಗಿ ಬರುತ್ತೆ.'

'ಹಾಗಾದರೆ ನಮಗೀಗ ಭಾರೀ ಕೆಲಸ ಕಾದಿದೆ.'

'ಅಲ್ಲವೇ ಮತ್ತೆ. ಈ ವ್ಯವಸ್ಥೆಯಲ್ಲಿ ಸಮಸ್ಯೆಗಳಿಗೆ ಪರಿಹಾರವಿದ್ದೇ ಇದೆ. ಅದರೊಂದಿಗೆ ಹೊಸ ವ್ಯವಸ್ಥೆಗೆ ಬೇಕಾದ ಬದಲಾವಣೆಗಳನ್ನು ಮಾಡಬೇಕಾಗಿ ಬರುತ್ತೆ.'

'ನೀವು ಹೇಳುವುದು ನಿಜ. ಹೊಸದರಲ್ಲಿ ನಾವು ಪಡೆಯ ಸದಸ್ಯರ ಕೆಲಸ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಕಮೀಷನರ್ ಹೊರಿಸಬಹುದು.'

ಅವಳ ಎಣಿಕೆ ನಿಜವಾಗಿತ್ತು. ಅನುದಿನದ ಡ್ಯೂಟಿ ಚಾರ್ಟ್‌ಗೆ ಒಂದು ವಾರದ ಪಟ್ಟಿಯು ರವಾನೆಯಾದಾಗ ಅದರಲ್ಲಿ ನಿರೀಕ್ಷೆಯಂತೆ ಅರೆಮಾನವ ಪಡೆಯ ಸದಸ್ಯರಿಗೆ ಪ್ರಾಥಮಿಕವಾಗಿ ತರಬೇತಿಯ ಅವಶ್ಯಕತೆ ಇದ್ದಿದ್ದರಿಂದ ಡ್ರೈವಿಂಗ್ ಸ್ಕೂಲ್‌ನಲ್ಲಿ ಪ್ರತ್ಯೇಕವಾಗಿ ವ್ಯವಸ್ಥೆ ಮಾಡಲಾಗಿದ್ದು, ಅಲ್ಲಿಗೆ ಮೇಲ್ವಿಚಾರಣೆಗಾಗಿ ನಿಯೋಜಿಸಲಾದ ತಂಡದಲ್ಲಿ ಹನ್ನಾಳೂ ಒಬ್ಬಳಾಗಿದ್ದಳು.

'ಅಂತೂ ನಾವು ಊಹೆ ಮಾಡಿಕೊಂಡಂತೆಯೇ ಹೊಸ ಜವಾಬ್ದಾರಿಗಳು ನಮ್ಮ ಮೇಲೆ ಹೊರಿಸಲಾಗಿದೆ.' ಹನ್ನಾಳನ್ನು ವಾಕಿಯಲ್ಲಿ ಸಂಪರ್ಕಿಸಿ ತನ್ನನ್ನೇ ಅವಳಿದ್ದಲ್ಲಿಗೆ ಟೆಲಿಪೋರ್ಟ್ ಮಾಡಿಸಿ ಅವಿರತ್ ಹೇಳಿದ್ದ.

'ನೀವು ಬಹಳಷ್ಟು ವೇಳೆ ಸರಿಯಾಗಿಯೇ ಊಹೆ ಮಾಡ್ತೀರಿ ಅವಿ. ನಿಮಗೆ ತನಿಖೆಯ ಜೊತೆಗೆ ಡೇಟಾ ಅನಾಲಿಸ್ಟ್ ಎಂಬ ಬಿರುದು ನಾಮ ಯಾಕೆ ಲಗತ್ತಿಸಲಾಗಿದೆ ಎನ್ನುವುದೀಗ ಮನದಟ್ಟಾಯಿತು.'

'ಅಂತಹ ದೊಡ್ಡ ಊಹೆ ಏನೂ ನಾನು ಮಾಡಿರ್‍ಲಿಲ್ಲ ಹನ್ಸ್. ಕೆಲಸವೇನೋ ನೀಡಬಹುದು. ಆದರೆ ಅವರಿಗೆ ಪ್ರಾಥಮಿಕವಾಗಿ ನೀಡುವಂತಹ ಶಿಷ್ಟಾಚಾರದ ಸಾಂಪ್ರದಾಯಿಕ ತರಬೇತಿ ಅನ್ವಯವಾಗುವುದಿರಲಿ, ಅವರು ಅದಕ್ಕೆ ತಕ್ಕಂತಹ ದೇಹ ಸಾಮರ್ಥ್ಯವನ್ನು ಹೊಂದಿಲ್ಲದಿದ್ದರೂ ಈಗಾಗಲೇ ಚಾಲನೆಯ ಅನುಭವ ಅವರಿಗಿತ್ತಾದ್ದರಿಂದ ಅಲ್ಲಿ ತಮ್ಮ ಅನುಭವದ ಹಿನ್ನೆಲೆಯಲ್ಲಿ ತರಬೇತಿ ಆಯೋಜಿಸಿರುವರೆಂದು ನನ್ನ ಅನಿಸಿಕೆ. ನಾಳೆ ಅಲ್ಲಿಗೆ ಹೋದಾಗ ಹೇಗೂ ವಿಷಯ ತಿಳಿಯುತ್ತೆ. ಇಂದೆಲ್ಲ ತಮ್ಮ ಸಮಯವನ್ನು ಪೂರ್ವ ತಯಾರಿಗೆ ಮೀಸಲಿಡಬೇಕಾಗಿದೆ.'

'ನಾನೀಗ ನನ್ನ ಕಚೇರಿಯಲ್ಲಿ ಆ ಕೆಲಸದಲ್ಲಿಯೇ ತೊಡಗಿದ್ದೇನೆ.'